ಇವುಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರವು ಹೊಸದಾಗಿ ಕಾಯಿದೆಯನ್ನು ರಚಿಸುತ್ತಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

ಬೆಳಗಾಂ ಕಾರ್ಪೊರೇಷನ್ ಕಮಿಷನರ್‌ರವರಿಂದ 18% ಹಣದ ದುರುಪಯೋಗ.

ಶ್ರೀ ಶಿವಾನಂದ.ಹೆಚ್.ಕೌಜಲಗಿ:- ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ತರುಣ ಭಾರತ ಪತ್ರಿಕೆಯಲ್ಲಿ ಬೆಳಗಾಂ ಆಯುಕ್ತರು, ಕಾರ್ಪೊರೇಷನ್‌ನವರು 18% ಮೀಸಲಿಟ್ಟಂಥ ಹಣದಲ್ಲಿ ಸುಮಾರು ಅರ್ಧಕೋಟಿ ಹಣವನ್ನು ಅಪರತಪರಾ ಮಾಡಿದ ಬಗ್ಗೆ ಈಗಾಗಲೇ ಸಿಆರ್‌ಇ ಸೆಲ್ ಎಸ್‌ಪಿ ಯವರು ಐಪಿಸಿ ಕಲಂ ನಂಬರ್ 207, 420, 409, 465, 511, 201 ಕೆಳಗೆ ಬೆಳಗಾವಿ ಕೋರ್ಟಿನಲ್ಲಿ ಕೇಸನ್ನು ದಾಖಲೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಇವತ್ತಿನ ದಿವಸ ಈ ವಿಷಯವನ್ನು ನಾನು ಇಲ್ಲಿ ಎತ್ತಿದ ಉದ್ದೇಶ ಎಂದರೆ ಈಗಾಗಲೇ ಅವರ ಮೇಲೆ ಕೇಸು ದಾಖಲಾಗಿದ್ದರೂ ಸಹಿತ ಅವರನ್ನು ಇನ್ನುವರೆಗೂ ಅರೆಸ್ಟ್ ಮಾಡಿರುವುದಿಲ್ಲ. ಎರಡನೆಯದಾಗಿ ಮತ್ತೆ ಆ ಕೇಸನ್ನು ಮುಂದುವರೆಸದಂತೆ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದಾರೆ ಎಂದು ತಿಳಿದು ಬರುತ್ತದೆ. ಅವರನ್ನು ಹಾಗೆಯೇ ಅಲ್ಲಿಯೇ ಬಿಟ್ಟಲ್ಲಿ ಅವರು ಈ ಮಹತ್ವದ ಕಾಗದಪತ್ರಗಳನ್ನು ಇವತ್ತಿನ ದಿವಸ ಡಿಸ್ಪ್ಯಾಯ್ ಮಾಡುತ್ತಾರೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ.ಎಸ್.ಆಚಾರ್ (ಬೈಂದೂರು):-ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನಲ್ಲಿರುವ ಎರಡು ಅರ್ಜಿಗಳನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ. ಅದರಲ್ಲಿ ಎದಡನೇ ಅರ್ಜಿಯಲ್ಲಿ ಗ್ರಾಮದ ಹೆಸರು ತಪ್ಪಾಗಿದೆ ಅದು ಕುಂದಬಾರಂದಾಡಿ ಎಂದು ಆಗಬೇಕು. ಅದ್ನು ಸರಿಪಡಿಸಿಕೊಳ್ಳಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

ಶ್ರೀ ಶೀವಾನಂದ ಹೆಚ್.ಕೌಜಲಗಿ:- ಈಗಾಗಲೇ ನಾನು ಹೇಳಿದಂತೆ ತರುಣ ಭಾರತ ಪೇಪರ್‌ನಲ್ಲಿ ನಿನ್ನೆಯ ದಿವಸ ಅರ್ಧ ಕೋಟಿ ರೂಪಾಯಂಚ ಬ್ರಷ್ಟಾಚಾರ ಪ್ರಕರಣನೀ ಆಯುಕ್ತ ..

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಅಧ್ಯಕ್ಷರೇ, ಇದು ನಿಮಗೆ ಅರ್ಥವಾಗುತ್ತಿಲ್ಲ. ಅರ್ಥವಾಗುವ ಭಾಷೆಯಲ್ಲಿ ಮಾತನಾಡಲಿ , ಅಂಚ ಪಂಚ ಎಂದು ಶುರುಮಾಡಿದರೆ ನಾವು ಯಾವ ಅಂಚೆಗೆ ಹೋಗೋಣ,ಎಲ್ಲಿಗೆ ಹೋಗೋಣ ಏನಿದು ? ಇವರು ಕನ್ನಡವನ್ನು ಅತ್ಯಂತ ಗಂಭೀರವಾಗಿ ತಿಳಿದುಕೊಂಡಿರುವವರು . ಹೊಸದಾಗಿ ಮರಾಠಿಯನ್ನು ತಂದು ಈ ಸಭೆಯಲ್ಲಿ ಓದುವುದಕ್ಕೆ ಹೊರಟಿದ್ದಾರೆ. ನಿಮ್ಮ ಕ್ಷೇತ್ರದ ಜನರು ತಾನೆ ಏನೆಂದಾರು. ಇವರ ತಂದೆಯವರು ಕರ್ನಾಟಕ ಏಕೀಕರಣಕ್ಕೆ ಬಹಳ ಹೋರಾಟ ಮಾಡಿದಂಥ ಮಹಾವ್ಯಕ್ತಿ . ಅವರ ಮಕ್ಕಳು ಈ ರೀತಿ ಮಾತನಾಡಿದರೆ ಹೇಗೆ.

ಶ್ರೀ ಎಸ್.ಎಚ್.ಕೌಜಲಗಿ :- ಮಾನ್ಯ ಅಧ್ಯಕ್ಷರೇ ಬೆಳಗಾವಿ ಆಯುಕ್ತರು ವುಮಾರು ಅರ್ಧಕೋಟಿ ರೂಪಾಟಿಗಳನ್ನು ಅಪರತಪರ ಮಾಡಿರವುದಾಗಿ ಬೆಳಗಾವಿಯ ಸಿಆರ್ ಸೆಲ್